ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1013 (773)
ಸದಸ್ಯರ ಹೆಸರು	:	ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	10.03.2021
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಪ್ರಸಕ್ತ ಸಾಲಿನ ಮಳೆಗಾಲದ ಸಂಧರ್ಬದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆ ಸುರಿದು ಪ್ರವಾಹವುಂಟಾಗಿ ಅಪಾರ ಹಾನಿ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;</td><td>ಬಂದಿದೆ</td></tr>
<tr><td>ಆ</td><td>ಬಂದಿದ್ದಲ್ಲಿ ತೊಂದರೆಗೆಡಾದ ಜನರಿಗೆ ಸಹಾಯಹಸ್ತ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>
ಪ್ರಸಕ್ತ ಸಾಲಿನಲ್ಲಿ ಅತಿವೃಷ್ಟಿ / ಪ್ರವಾಹದಿಂದ ಹಾನಿಗೊಳಗಾದ ಮನೆಗಳ ಹಾನಿ ಮತ್ತು ಪ್ರವಾಹದ ನೀರು ನುಗ್ಗಿರುವ ಗೃಹಪಯೋಗಿ ವಸ್ತುಗಳ ಪರಿಹಾರಕ್ಕಾಗಿ, ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯಲ್ಲಿ ನಿಗಧಿಪಡಿಸಿರುವ ದರಕ್ಕಿಂತ ಹೆಚ್ಚುವರಿಯಾಗಿ ಕೆಳಕಂಡ ದರದಲ್ಲಿ ನೆರೆ ಸಂತ್ರಸ್ಥರಿಗೆ ಪರಿಹಾರವನ್ನು ಪಾವತಿಸಲಾಗುತ್ತಿದೆ.
<table>
<tr><th>ಕ್ರ. ಸಂ</th><th>ಮನೆ ಹಾನಿ ಪ್ರಮಾಣ</th><th>ವರ್ಗ</th><th>ಮಾರ್ಗ ಸೂಚಿ ದರ</th><th>ಪರಿಷ್ಕೃತ ದರ</th></tr>
<tr><td>1</td><td>ಶೇ.75 ಕ್ಕಿಂತ ಹೆಚ್ಚು ಸಂಪೂರ್ಣ ಮನೆಹಾನಿ</td><td>ಎ</td><td rowspan="3">95,100/-</td><td>5,00,000/</td></tr>
<tr><td>2</td><td>ಶೇ.25-75 ಭಾಗಶಃ ಮನೆ ಹಾನಿ (ಪುನರ್ನಿರ್ಮಾಣ)</td><td>ಬಿ</td><td>5,00,000/-</td></tr>
<tr><td>3</td><td>ಶೇ.25-75 ಭಾಗಶಃ ಮನೆ ಹಾನಿ (ದುರಸ್ಥಿ)</td><td>ಬಿ1</td><td>3,00,000/-</td></tr>
<tr><td>4</td><td>ಶೇ.15-25 ರಷ್ಟು ಅಲ್ಪ ಸ್ವಲ್ಪ ಮನೆಹಾನಿ</td><td>ಸಿ</td><td>5,200/-</td><td>50,000/-</td></tr>
<tr><td>5</td><td>ಗೃಹಪಯೋಗಿ ವಸ್ತು ಹಾನಿಯಾದ ಪ್ರತಿ ಕುಟುಂಬಕ್ಕೆ</td><td></td><td>3800/-</td><td>10,000/-</td></tr>
<tr><td>6</td><td>ಮಾನವ ಜೀವ ಹಾನಿ</td><td></td><td>4 ಲಕ್ಷ</td><td>5 ಲಕ್ಷ</td></tr>
</table>
ಉಳಿದಂತೆ ಜಾನುವಾರು ಹಾನಿ, ಮೂಲ ಸೌಕರ್ಯಗಳ ತುರ್ತು ದುರಸ್ಥಿ ಮತ್ತು ಬೆಳೆ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಪರಿಹಾರ ಪಾವತಿಸಲಾಗುತ್ತಿದೆ.

ಮನೆ ಹಾನಿ ಪ್ರಕರಣಗಳಿಗೆ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ಇವರ ವತಿಯಿಂದ ತಯಾರಿಸಲಾದ ತಂತ್ರಾಂಶದ ಮೂಲಕ, ಜಿಪಿಎಸ್ ಆಧಾರಿತ ಮನೆ ಹಾನಿ ಛಾಯಚಿತ್ರಗಳನ್ವಯ ಪರಿಹಾರ ಮೊತ್ತವನ್ನು ಮನೆ ದುರಸ್ತಿ / ನಿರ್ಮಾಣದ ಪ್ರಗತಿಯನುಸಾರ 4 ಕಂತುಗಳಲ್ಲಿ ಪರಿಹಾರವನ್ನು ನೆರೆ ಸಂತ್ರಸ್ಥರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದೆ. ಈವರೆಗೂ 6280 ಪ್ರಕರಣಗಳನ್ನು ತಂತ್ರಾಂಶದಲ್ಲಿ ದಾಖಲಿಸಿದ್ದು, ಪರಿಹಾರ ಧನ ನೀಡಲು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ರೂ 3129.20 ಲಕ್ಷಗಳನ್ನು ಬಿಡುಗಡೆಗೊಳಿಸಿದೆ.

ಅತಿವೃಷ್ಟಿ / ಪ್ರವಾಹದಿಂದ ಹಾನಿಯಾದ ಬೆಳೆಗಳಿಗೆ ಪರಿಹಾರ ತಂತ್ರಾಂಶದ ಮೂಲಕ, ಆಧಾರ್ ಸಂಖ್ಯೆ ಅನುಸಾರ ಬೆಳೆ ಹಾನಿ ವಿಸ್ತೀರ್ಣವನ್ನು ಗರಿಷ್ಠ 2 ಹೆಕ್ಟೇರ್ ಗೆ ಸೀಮಿತಗೊಳಿಸಿ ಇನ್ ಪುಟ್ ಸಬ್ಸಿಡಿಯನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದೆ. ಈವರೆಗೂ ಬೆಳಗಾವಿ ಜಿಲ್ಲೆಯಲ್ಲಿ 98006 ರೈತರಿಗೆ ರೂ.75.01 ಕೋಟಿಗಳನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ.
</td></tr>
</table>

ಇ 2018-19, 2019-20 ಹಾಗೂ 2020-21 ನೇ ಸಾಲಿನಲ್ಲಿ ಈ ಜಿಲ್ಲೆಯಲ್ಲಿ ಆಗಿರುವ ಮಳೆಯ ಪ್ರಮಾಣವೆಷ್ಟು ;

2018-19, 2019-20 ಹಾಗೂ 2020-21 ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಆಗಿರುವ ಮಳೆಯ ಪ್ರಮಾಣ ಈ ಕೆಳಗಿನಂತಿದೆ (ಮಿಮಿಗಳಲ್ಲಿ)

ಕ್ರ. ಸಂ.	ತಾಲ್ಲೂಕು	2018-19		2019-20		2020-21	
		ವಾಡಿಕೆ ಮಳೆ	ವಾಸ್ತವ ಮಳೆ	ವಾಡಿಕೆ ಮಳೆ	ವಾಸ್ತವ ಮಳೆ	ವಾಡಿಕೆ ಮಳೆ	ವಾಸ್ತವ ಮಳೆ
1	ಬೆಳಗಾವಿ	1418.0	1070.5	1418	2359.1	1418	1592.6
2	ಖಾನಾಪೂರ	1969.0	1935.7	1969.0	3285.8	1969.0	2160.2
3	ಹುಕ್ಕೇರಿ	762.0	454.0	762.0	766.6	762.0	1056.7
4	ಬೈಲಹೊಂಗಲ	691.0	617.20	691.0	1328.4	657.0	974.0
5	ಕಿತ್ತೂರು	691.0	617.20	691.0	1328.4	657.0	974.0
6	ರಾಮದುರ್ಗ	546.0	286.0	546.0	627.0	546.0	584.0
7	ಗೋಕಾಕ	542.0	356.6	452.0	779.70	542.0	774.4
8	ಸವದತ್ತಿ	588.0	1954.6	588.0	3869.9	588	4575.1
9	ಮೂಡಲಗಿ	542.0	356.6	542.0	779.70	542.0	774.4
10	ಚಿಕ್ಕೋಡಿ	663.0	687.2	663.0	994.3	663.0	1067.1
11	ರಾಯಬಾಗ	490.0	407.0	490.0	956.6	490.0	852.0
12	ಅಥಣಿ	2150	2585.1	3880	4663.5	4460	5353.2
13	ನಿಪ್ಪಾಣಿ	663.0	749.9	663.0	1182.7	663.0	1336.9
14	ಕಾಗವಾಡ	647.0	776.4	1233.0	1468.7	975.0	1170.6

ಈ ಕಳೆದ ವರ್ಷ ಹಾಗೂ ಪ್ರಸಕ್ತ ವರ್ಷದಲ್ಲಿ ಜಿಲ್ಲೆಯಲ್ಲಿ ಪ್ರವಾಹದಿಂದಾಗಿ ಉಂಟಾದ ಹಾನಿಯ ಪ್ರಮಾಣ ಎಷ್ಟು ;

ಬೆಳಗಾವಿ ಜಿಲ್ಲೆಯಲ್ಲಿ 2019-20 ಮತ್ತು 2020-21 ನೇ ಸಾಲಿನಲ್ಲಿ ಭೀಕರ ಪ್ರವಾಹದಿಂದಾಗಿ ಆದ ಮನೆ ಹಾನಿ, ಪ್ರಾಣ ಹಾನಿ ಹಾಗೂ ಬೆಳೆ ಹಾನಿಯ ವಿವರಗಳು ಈ ಕೆಳಗಿನಂತಿವೆ:

	ಜಿಲ್ಲೆ	ಮಾನವ ಜೀವ ಹಾನಿ	ಜಾನು ವಾರು ಹಾನಿ	ಮನೆಗಳ ಹಾನಿ	ಬೆಳೆ ಹಾನಿ (ಹೆಕ್ಟೇರ್)	ಗೃಹ ಉಪ ಯೋಗಿ ವಸ್ತುಗಳ ಹಾನಿ
2019-20	ಬೆಳಗಾವಿ	33	761	66203	253840.12	112210
2020-21	ಬೆಳಗಾವಿ	9	98	6280	159922.2	08

ಉ ಈ ಪ್ರಕೃತಿ ವಿಕೋಪದಿಂದಾಗಿ ಪ್ರಸ್ತುತ ಜಿಲ್ಲೆಗೆ ಆದ ಆರ್ಥಿಕ ಹಾನಿ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ ಪ್ರಕೃತಿ ವಿಕೋಪದಿಂದಾಗಿ ಪ್ರಸ್ತುತ ಜಿಲ್ಲೆಗೆ ಆದ ಆರ್ಥಿಕ ಹಾನಿಯ ವಿವರ ಈ ಕೆಳಗಿನಂತಿದೆ. (ರೂ ಲಕ್ಷಗಳಲ್ಲಿ)

ಕ್ರ.ಸಂ	ತಾಲ್ಲೂಕು	ಮೊತ್ತ
1	ಬೆಳಗಾವಿ	3770.90
2	ಖಾನಾಪೂರ	2774.20
3	ಹುಕ್ಕೇರಿ	9578.35
4	ಬೈಲಹೊಂಗಲ	14915.00
5	ಸವದತ್ತಿ	13344.00
6	ರಾಮದುರ್ಗ	8900.00
7	ಗೋಕಾಕ	67070.43
8	ಕಿತ್ತೂರು	483.77
9	ಮೂಡಲಗಿ	7237.10
10	ಚಿಕ್ಕೋಡಿ	5655.74
11	ರಾಯಬಾಗ	1992.23
12	ಅಥಣಿ	20648.20
13	ನಿಪ್ಪಾಣಿ	1266.00
14	ಕಾಗವಾಡ	8221.50
	ಒಟ್ಟು	**165857.42**

ಕಂಇ 91 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು